# ಉಪ್ಪಿ ಟು ಉಪ್ಪಿಟ್ಟು!

'ಉಪ್ಪಿ–2' ಇದು ಉಪೇಂದ್ರ ನಿರ್ದೇಶಿಸಲಿರುವ ಹೊಸ ಚಿತ್ರದ ಹೆಸರು. ಹದಿನಾಲ್ಕು ವರ್ಷಗಳ ಹಿಂದೆ ತೆರೆಕಂಡ 'ಉಪೇಂದ್ರ' ಚಿತ್ರಕ್ಕೂ ಹೊಸ ಚಿತ್ರಕ್ಕೂ ಸಂಬಂಧವಿಲ್ಲ ಎನ್ನುವುದು ಸ್ವತಃ ಉಪೇಂದ್ರ ನೀಡಿರುವ ಸ್ಪಷ್ಟನೆ.

ಸದ್ಯಕ್ಕೆ 'ಉಪ್ಪಿ–2' ಶೀರ್ಷಿಕೆಯಷ್ಟೇ ಅಂತಿಮಗೊಂಡಿದೆ. ಉಪ್ಪಿ 'ಭಾಗ 2' ಎನ್ನುವಂತೆಯೂ, ಉಪ್ಪಿಟ್ಟಿನಂತೆಯೂ ಧ್ವನಿಸುವ ಈ ಶೀರ್ಷಿಕೆ ಉಪೇಂದ್ರರ ಹಿಂದಿನ ಚಿತ್ರಗಳ ಶೀರ್ಷಿಕೆಗಳಂತೆಯೇ ಚಿತ್ರ ರಸಿಕರಲ್ಲಿ ಕುತೂಹಲ ಕೆರಳಿಸಿದೆ. ಉಪೇಂದ್ರರ ಪತ್ನಿ ಪ್ರಿಯಾಂಕ ನಿರ್ಮಿಸಲಿರುವ ಈ ಚಿತ್ರದ ಸಂಗೀತ ನಿರ್ದೇಶಕರು ಗುರುಕಿರಣ್. ನಿರ್ದೇಶನದ ಜೊತೆಗೆ ಕಥೆ, ಚಿತ್ರಕಥೆ, ಸಂಭಾಷಣೆಯೂ ಉಪೇಂದ್ರ ಅವರದ್ದೇ. ಉಳಿದಂತೆ ಚಿತ್ರದ ತಾರಾಗಣವಾಗಲೀ, ತಂತ್ರಜ್ಞರ ಬಳಗವಾಗಲೀ ಸ್ಪಷ್ಟವಾಗಿಲ್ಲ.

ರಾಕ್‌ಲೈನ್ ವೆಂಕಟೇಶ್ ಅವರಿಗಾಗಿ 'ಸೂಪರ್' ನಿರ್ದೇಶಿಸಿದ ನಂತರ ಮತ್ತೆ ನಿರ್ದೇಶನಕ್ಕೆ ಮುಂದಾಗಿರುವ ಉಪೇಂದ್ರ, ತಮ್ಮ ಹೊಸ ಚಿತ್ರದ ತಯಾರಿಗೆ ಇನ್ನಿಲ್ಲದ ಮುತುವರ್ಜಿ ವಹಿಸುತ್ತಿದ್ದಾರೆ. 'ಕಥೆ ಏನು?' ಎನ್ನುವ ಸುಳಿವನ್ನು



ಅವರು ಬಿಟ್ಟುಕೊಟ್ಟಿಲ್ಲ. ಉಪೇಂದ್ರರ ನಿಕಟವರ್ತಿಗಳ ಮಾತುಗಳನ್ನು ನಂಬುವುದಾದರೆ, ಸಮಕಾಲೀನ ರಾಜಕಾರಣದ ಬಿಂಬಗಳು ಚಿತ್ರದಲ್ಲಿ ಇರಲಿವೆ. ರಾಜಕಾರಣದ ಬಗ್ಗೆ ಉಪೇಂದ್ರ ಅವರು ಆಸಕ್ತಿ ತಾಳಿರುವುದು ಗುಟ್ಟಿನ ವಿಷಯವೇನಲ್ಲ. ಅವರ ನಿರ್ದೇಶನದ 'ಸೂಪರ್' ಚಿತ್ರದಲ್ಲೂ ರಾಜಕೀಯ ವಿಡಂಬನೆಯ ಕಥನವಿತ್ತು.

'ಉಪ್ಪಿ–2' ಸೆಟ್ಟೇರುವುದು ಯಾವಾಗ ಎನ್ನುವುದನ್ನೂ ಉಪೇಂದ್ರ ಇನ್ನೂ ನಿರ್ಧರಿಸಿಲ್ಲ. ಸೆ.8 ಅವರ ಜನ್ಮದಿನ. ಕಳೆದ ಜನ್ಮದಿನದಂದು 'ಹೋಂ ಬ್ಯಾನರ್'ನ ಪ್ರಕಟಣೆ ನಡೆದಿತ್ತು. ಈ ಸಲದ ಹುಟ್ಟುಹಬ್ಬದ ಸಂದರ್ಭದಲ್ಲಿ ಸಿಹಿರೂಪದಲ್ಲಿ ತಮ್ಮ ನಟನೆ–ನಿರ್ದೇಶನದ ಚಿತ್ರವನ್ನು ಅಭಿಮಾನಿಗಳಿಗೆ ನೀಡಬೇಕು ಎನ್ನುವ ಆಸೆಯಂತೂ ಅವರಿಗಿದೆ.

■ ರಘು

